


***

ಪಂಜಾಬಿಗಳೋ ಹರಿಯಾಣಿಗಳೋ ನಡೆಸುವ ಐಷಾರಾಮಿ ಮದುವೆಗಳ ಕಥೆಗಳನ್ನು ಪಕ್ಕಕ್ಕೆ ಇಡೋಣ. ನಮ್ಮ ಕೊಪ್ಪಳದ, ಮಂಡ್ಯದ, ವಿಜಯಪುರದ, ಚಾಮರಾಜನಗರದ ಬಡ ಬೋರೇಗೌಡನ ಮನೆಯಲ್ಲಿ ನಡೆಯುತ್ತಿದ್ದ ಮದುವೆಗಳನ್ನು ನೋಡೋಣ. ಇವುಗಳೇನು ಕಡಿಮೆ ವೆಚ್ಚದಿಂದ ಕೂಡಿರುತ್ತಿದ್ದವೇ? ಮಗಳ ಮದುವೆಗಾಗಿ ಹೊಲ ಮಾರುವ ಪರಿಪಾಟ ಎಲ್ಲ ಕಡೆಗಳಲ್ಲಿ ಸಾಮಾನ್ಯವೇ ಆಗಿಬಿಟ್ಟಿದ್ದವಲ್ಲ!

‘ಮೊದಲು ಯಾರಾದರೂ ಊರುಬಿಟ್ಟು ಬೇರೆಡೆ ಮದುವೆ ಮಾಡಿದರೆ ಊರ ಜನಕ್ಕೆ ಅನ್ನ ಹಾಕೋಕೆ ಹೆದರಿ ಛತ್ರಕ್ಕೆ ಓಡಿಹೋದ ಎಂದು ಗೇಲಿ ಮಾಡುತ್ತಿದ್ದರು. ಬಳಿಕ ಮನೆಯ ಮುಂದೆ ಮದುವೆಯನ್ನು ಮಾಡಿದರೆ ಗೌರವಕ್ಕೆ ಕುಂದು ಎನ್ನುವ ಅಭಿಪ್ರಾಯ ಬಲಗೊಳ್ಳುತ್ತಾ ಬಂತು. ಲಕ್ಷಾಂತರ ರೂಪಾಯಿ ಕೊಟ್ಟು ಛತ್ರ ಬಾಡಿಗೆ ಪಡೆಯುವುದು, ಬಂದವರಿಗೆಲ್ಲ ಭೂರಿ

# ಮಂತ್ರ ಮಾಂಗಲ್ಯದ ದೀಕ್ಷೆ ಕೊಟ್ಟ ಕುವೆಂಪು



ದುಂದುವೆಚ್ಚ, ಸಾಲಬಾಧೆ, ಕಂದಾಚಾರ, ಒಣಪ್ರತಿಷ್ಠೆಗೆ ಒಳಗಾಗಿ ಪುರೋಹಿತಶಾಹಿ ಹಿಡಿತಕ್ಕೂ ಸಿಕ್ಕ ಜನಸಾಮಾನ್ಯರನ್ನು ಕಂಡು ಕುವೆಂಪು ಅವರ ಮನಸ್ಸು ಮಮ್ಮಲವಾಗಿ ಮರಗಿತ್ತು. ಹೀಗಾಗಿ ಸರಳವಾಗಿ ಮದುವೆಯಾಗಿ ಸಹಜವಾದ ಬಾಳು ಬಾಳಲು ಅವರು ಶೋಧಿಸಿದ ಮಾರ್ಗವೇ ಮಂತ್ರ ಮಾಂಗಲ್ಯ. ಶಾಸ್ತ್ರ ಗ್ರಂಥಗಳನ್ನು ಅಧ್ಯಯನ ಮಾಡಿ, ಸಮಾಜದ ಆರೋಗ್ಯಕ್ಕೆ ಅಗತ್ಯವಾದ ಮೌಲ್ಯಗಳ ಕುರಿತೂ ಚಿಂತಿಸಿ ‘ಮಂತ್ರ ಮಾಂಗಲ್ಯ’ ಎಂಬ ಪರಿಕಲ್ಪನೆಯನ್ನು ಅವರು ಹುಟ್ಟುಹಾಕಿದರು. ಕುವೆಂಪು ಅವರ ಮಕ್ಕಳು ಈ ಆದರ್ಶದ ಬೆಳಕಿನಲ್ಲೇ ಮದುವೆಯನ್ನು ಸರಳವಾಗಿ ಮಾಡಿಕೊಂಡರು. ಮೈಸೂರಿನಲ್ಲಿ ಪ್ರತಿವರ್ಷ ಹಲವು ಯುವಕ–ಯುವತಿಯರು ಮಂತ್ರ ಮಾಂಗಲ್ಯದ ವಿಧಾನದಿಂದಲೇ ವಿವಾಹ ಬಂಧನಕ್ಕೆ ಒಳಗಾಗುವುದು ರೂಢಿ. ಮದುವೆಯ ಎಲ್ಲ ಸಂಕೀರ್ಣ ವಿಧಿ ವಿಧಾನಗಳಿಗೆ ಮತ್ತು ಅವುಗಳ ಮೂಲಕ ಆಚರಣೆಯಲ್ಲಿದ್ದ ತರತಮಗಳಿಗೆ ಪರ್ಯಾಯವಾಗಿ, ಪರಿಹಾರವಾಗಿ ಮಂತ್ರ ಮಾಂಗಲ್ಯ ಒದಗಿಬಂದಿದ್ದು ಈಗ ಇತಿಹಾಸ.

‘ಮಂತ್ರ’ ಎಂಬ ಪದ, ತನ್ನ ಧ್ವನಿಶಕ್ತಿಯ ವಿಶಾಲಾರ್ಥದಲ್ಲಿ ಸ್ತೋತ್ರ, ಪ್ರಾರ್ಥನೆ, ಹಾರೈಕೆ ಮೊದಲಾದ ಮಾನವೀಯ ಆಶಯಗಳನೆಲ್ಲ ಒಳಗೊಂಡಿದೆ. ಅವುಗಳ ಆಧಾರದ ಮೇಲೆಯೇ ಮಂತ್ರ ಮಾಂಗಲ್ಯ ಎಂಬ ಸರಳ ವಿವಾಹ ವಿಧಿ ರೂಪುಗೊಂಡಿದೆ. ವಧುವರರು, ತಮ್ಮ ಬದುಕಿನ ಅಮೃತ ಮುಹೂರ್ತದಲ್ಲಿ ಪ್ರತಿಜ್ಞಾ ವಿಧಿಗಳ ಮೂಲಕ ಸರಳ ವಿಧಾನದಲ್ಲಿ ವಿವಾಹದ ಬಂಧನಕ್ಕೆ ಒಳಗಾಗುತ್ತಾರೆ.

ವಧು–ವರ ವಿದ್ಯಾವಂತರಾದರೆ ಈ ಪ್ರತಿಜ್ಞಾ ವಿಧಿಗಳನ್ನು ಇಬ್ಬರೂ ಒಟ್ಟೊಟ್ಟಾಗಿ ಇದನ್ನು ಓದಬಹುದು; ಓದಲು ಬಾರದಿದ್ದರೆ ಓದುವವರ ಕಡೆಯಿಂದ ಓದಿಸಿ ನಂತರ ವಧು–ವರರ ಬಾಯಿಂದ ಅದನ್ನು ಹೇಳಿಸಬಹುದು. ವೇದಿಕೆಯಲ್ಲಿ ವಧು–ವರ ಮತ್ತು ಅವರ ಪಾಲಕರು, ಹಿರಿಯರು ಉಪಸ್ಥಿತರಿರಬಹುದು: ವೇದಿಕೆಯ ಮುಂದೆ ಮದುವೆಗೆ ಸಾಕ್ಷಿಯಾಗಲು ಬಂದವರು ಕುಳಿತಿರಬಹುದು. ಸಭೆಗೆ ವಧು–ವರ, ಅವರ ತಾಯಿ–ತಂದೆಯವರನ್ನು ನಿರೂಪಕರೊಬ್ಬರು ಪರಿಚಯಿಸಬಹುದು. ನಂತರ ವಧು–ವರ ಪರಸ್ಪರ ಹೂವಿನ ಹಾರಗಳನ್ನು ಬದಲಾಯಿಸಿಕೊಂಡು, ಮಾಂಗಲ್ಯಧಾರಣೆಯ ಪವಿತ್ರ ಕಾರ್ಯವನ್ನು ನೆರವೇರಿಸುವರು. ಪಾಲಕರು ಅವರಿಗೆ ಆಶೀರ್ವದಿಸುವರು. ಹಾಗೆಯೇ ಹಿರಿಯರು, ಮದುವೆಗೆ ಬಂದಂತಹ ಬಾಂಧವರು, ಗೆಳೆಯರೆಲ್ಲ ಬಂದು ವಧು–ವರರಿಗೆ ಶುಭಾಶಯ ಕೋರುವವರು. ಮಡಿ, ಮೈಲಿಗೆ, ಮುಯ್ಯಿ ಇರದೆ ಮದುವೆಗೆ ಬಂದವರಿಗೆಲ್ಲ ಸರಳವಾಗಿ ಊಟದ ವ್ಯವಸ್ಥೆ ಮಾಡಬಹುದು.

‘ಒಲುಮೆ ಒಂದು ದಿವ್ಯರಕ್ಷೆ ಇಹ ಸಮಸ್ಯೆಗೆ/ ಮದುವೆ ಅದಕೆ ಮಧುರದೀಕ್ಷೆ ಗೃಹತಪಸ್ಯೆಗೆ’ ಎಂದೆನ್ನುವ ಕುವೆಂಪು ಅವರು ಕೊಟ್ಟ ಮಂತ್ರ ದೀಕ್ಷೆಯ ಪ್ರತಿಜ್ಞಾವಿಧಿ ಹೀಗಿದೆ:

- ಇಲ್ಲಿ ಈ ದಿನ ನಿಮ್ಮೆಲ್ಲರ ಸಮ್ಮುಖದಲ್ಲಿ ಮದುವೆಯಾಗುವುದರ ಮೂಲಕ ನಾವಿಬ್ಬರೂ ಮಾನಸಿಕ, ಆಧ್ಯಾತ್ಮಿಕ, ದಾಸ್ಯಗಳ ಸಂಕೋಲೆಗಳಿಂದ ಮುಕ್ತರಾಗುತ್ತಿದ್ದೇವೆ
- ನಾವು ಈ ಭೂಮಿಯಲ್ಲಿ ಯಾವುದೇ ಜಾತಿ–ಜನಾಂಗಗಳಿಗಿಂತ ಮೇಲಾದವರಲ್ಲ. ಹಾಗೆಯೇ ಯಾವುದೇ ಜಾತಿ– ಜನಾಂಗಗಳಿಗಿಂತ ಕೀಳಾದವರೂ ಅಲ್ಲ. ನಾವಿಬ್ಬರೂ ಮನುಷ್ಯ ಸಮಾಜದ ಎಲ್ಲ ಕೃತಕ ಜಾತಿಗಳಿಂದ ಮುಕ್ತರಾಗಿದ್ದೇವೆ
- ನಾವು ಇಂದು ಎಲ್ಲ ಸಂಕುಚಿತ ಮತಧರ್ಮಗಳಿಂದ ದೂರಾಗಿದ್ದೇವೆ. ಎಲ್ಲ ಆಚಾರ ಸಂಪ್ರದಾಯಗಳಿಂದ ಮುಕ್ತರಾಗಿದ್ದೇವೆ. ಅಸತ್ಯ ಮತ್ತು ಮೂಢನಂಬಿಕೆಗಳಿಂದ ದೂರಾಗಿದ್ದೇವೆ.
- ಮನುಷ್ಯ ಜೀವಿತ ಕಾಲವೇ ಒಂದು ಸುಮುಹೂರ್ತ. ಕಾಲವು ನಿರ್ಗುಣವಾದದ್ದು. ರಾಹುಕಾಲ, ಗುಳಿಕಕಾಲವನ್ನು ನೋಡುವ ಅಗತ್ಯವಿಲ್ಲ. ಜೀವಿತ ಕಾಲದ ಪ್ರತಿಕ್ಷಣವೂ ಅತ್ಯಮೂಲ್ಯ. ನಮ್ಮ ಕರ್ತವ್ಯ ಮತ್ತು ನಡವಳಿಕೆಗಳಿಂದ ಸತ್ಯವನ್ನು ಅರಿತು ಒಳ್ಳೆಯ ಕಾಲವನ್ನಾಗಿ ಮಾಡಿಕೊಳ್ಳುತ್ತೇವೆ
- ಮನುಷ್ಯ ಸಮಾಜದಿಂದ ಮಾನವೀಯ ಮೌಲ್ಯಗಳೇ ಮೊದಲನೆಯ ಹಾಗೂ ಕೊನೆಯ ದೇವರು. ಗಂಡನಾಗಲಿ, ಹೆಂಡತಿಯಾಗಲಿ ಯಾರಿಗೂ ಯಾರೂ ಅಧೀನರಲ್ಲ. ಇಬ್ಬರೂ ಸರ್ವ ಸ್ವತಂತ್ರರು. ಸಮಾನತೆಯುಳ್ಳವರು ಹಾಗೂ ಪರಸ್ಪರ ಪ್ರೀತಿ, ನಂಬಿಕೆ, ವಿಶ್ವಾಸವುಳ್ಳವರು
- ಗಂಡ ಹೆಂಡತಿಯರನ್ನು ಒಟ್ಟಿಗೆ ಬದುಕುವಂತೆ ಮಾಡುವ ಸಾಧನ ಒಂದೇ, ಪ್ರೀತಿ. ನಿರ್ಭೀತಿಯಿಂದ ವಾಸ್ತವವನ್ನು ಒಪ್ಪಿಕೊಳ್ಳುವುದು ಸತ್ಯಾನ್ವೇಷಣೆಯ ಮೊದಲ ಹಂತ, ಯೋಗದ ಮೊದಲ ಪಾಠ. ಪರವಂಚನೆ ಮತ್ತು ಆತ್ಮವಂಚನೆ ಮಾಡಿಕೊಳ್ಳುವವರಿಗೆ ಅಜ್ಞಾನದಿಂದ, ತಮಸ್ಸಿನಿಂದ ಮುಕ್ತಿ ಇರುವುದಿಲ್ಲ. ದೇವರ ಹೆಸರಿನಲ್ಲಿ ಸುಳ್ಳು ಹೇಳುವವರನ್ನು, ವಂಚನೆ ಮಾಡುವವರನ್ನು ನಾವು ನಂಬುವುದಿಲ್ಲ
- ವರದಕ್ಷಿಣೆ ಅಥವಾ ವಧುದಕ್ಷಿಣೆ ವ್ಯವಹಾರಗಳಿಗೆ ಒಳಗಾಗದೆ ನಾವು ನಮ್ಮ ಮದುವೆ ಮಾಡಿಕೊಳ್ಳುತ್ತಿದ್ದೇವೆ. ಈಗ ನಾವು ಹೇಳಿದ ಈ ಮಾತುಗಳೆಲ್ಲಾ ನಮಗೆ ಜೀವನದ ದಾರಿದೀಪವಾಗಲಿ; ಅಸಮಾನತೆ, ಮೌಢ್ಯ, ಆಜ್ಞಾನ, ಅಂಧಕಾರಗಳ ವಿರುದ್ಧ ನೀವೂ ನಮ್ಮೊಂದಿಗೆ ಭಾಗಿಗಳಾಗಬೇಕೆಂದು ನಿಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ. ನಾವು ಈ ದಿನದಿಂದ ದಂಪತಿಯೆಂದು ಘೋಷಿಸುತ್ತೇವೆ.